ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಸಿಂಡಿಕೇಟ್–28/166 /2024–25 ದಿನಾಂಕ: 21.09.2024

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 18.09.2024 ರಂದು ಜರುಗಿದ 28ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 18.09.2024 ರಂದು ಜರುಗಿದ 28ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಸಿಂಡಿಕೇಟ್/28ನೇ ಸಾಮಾನ್ಯ/166/2024–25 ದಿನಾಂಕ:21.09.2024

ದಿನಾಂಕ 18.09.2024 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ 28ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ಜ್ಯೋತಿ ವೆಂಕಟೇಶ್ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 5. | ಡಾ. ಪ್ರೇಮ | ಸದಸ್ಯರು |
| 6. | ಡಾ. ಪಂಕಜ್ ಚೌಧರಿ | ಸದಸ್ಯರು |
| 7. | ಡಾ. ಸುಮಯಾ ಫಾತೀಮಾ | ಸದಸ್ಯರು |
| 8. | ಡಾ. ಎಂ. ಆರ್.ಲಕ್ಷ್ಮೀನಾರಾಯಣ | ಸದಸ್ಯರು |
| 9. | ಡಾ. ಹೆಚ್. ಕೃಷ್ಣರಾಮ್ | ಸದಸ್ಯರು |
| 10. | ರೆವ್ ಡಾ. ಫ್ರಾನ್ಸಿಸ್ ಅಸಿಸಿ ಅಲ್ಮೇದಾ | ಸದಸ್ಯರು |
| 11. | ಶ್ರೀ ಕೆ.ಪಿ. ಪಾಟೀಲ್ | ಸದಸ್ಯರು |
| 12. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 13. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕುಲಸಚಿವರು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮ ನಿರ್ದೇಶಿತರಾಗಿ ಇಂದು ಸಭೆಯಲ್ಲಿ ಉಪಸ್ಥಿತರಿರುವ 1. ಡಾ. ಹೆಚ್. ಕೃಷ್ಣರಾಮ್, 2. ರೆವ್ ಡಾ. ಫ್ರಾನ್ಸಿಸ್ ಅಸಿಸಿ ಅಲ್ಮೇದಾ 3. ಶ್ರೀ ಕೆ. ಪಿ. ಪಾಟೀಲ್ ರವರನ್ನು ಸಭೆಗೆ ಸ್ವಾಗತಿಸಿ ಉಳಿದಂತೆ ಎಲ್ಲಾ ಸದಸ್ಯರಿಗೆ ಸ್ವಾಗತಕೋರಿ ಸಭೆಗೆ ಚಾಲನೆ ನೀಡಲು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳಿಗೆ ವಿನಂತಿಸಿದರು.

ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ಕಳೆದ ಸಿಂಡಿಕೇಟ್ ಸಭೆಯ ನಂತರ ವಿಶ್ವವಿದ್ಯಾನಿಲಯದ ಪ್ರಮುಖ ಚಟುವಟಿಕೆಗಳ ಕುರಿತು ಸಂಕ್ಷಿಪ್ತ ವರದಿಯನ್ನು ಮಂಡಿಸಿದರು.

1. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ದಿನಾಂಕ: 27.08.2024 ರಂದು ಅಧಿಸೂಚನೆ ಹೊರಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 28(1)(ಜಿ)ರಡಿ ಪ್ರದತ್ತವಾದ ಅಧಿಕಾರದನ್ವಯ ಸದರಿ ನಿಯಮದ ಪ್ರಕರಣ 38(1), 39(1)ರ ಉಪಬಂಧಕ್ಕೊಳಪಟ್ಟು ಬೆಂಗಳೂರು

ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪ್ರಾಧಿಕಾರಕ್ಕೆ 6 ಜನರನ್ನು ನಾಮನಿರ್ದೇಶನ ಮಾಡಿರುತ್ತಾರೆ. ತದನಂತರ ದಿನಾಂಕ: 02.09.2024ರ ಸರ್ಕಾರದ ಪತ್ರ ಸಂಖ್ಯೆ: ಇಡಿ 324 ಯುಬಿವಿ 2024 ರಲ್ಲಿ ಮಾನ್ಯ ಉಚ್ಚನ್ಯಾಯಾಲಯದ ರಿಟ್‌ಅರ್ಜಿ ಸಂಖ್ಯೆ 23999/2024 ರಲ್ಲಿ ಮಾನ್ಯ ನ್ಯಾಯಾಲಯದ ನಿರ್ದೇಶನ ಹಾಗೂ ಸರ್ಕಾರಿ ವಕೀಲರ ಪತ್ರವನ್ನು ಪ್ರಸ್ತಾಪಿಸಿ ನಾಮನಿರ್ದೇಶನ ಮಾಡಿದ ಸದಸ್ಯರಲ್ಲಿ ಸದರಿ ರಿಟ್ ಅರ್ಜಿಯಲ್ಲಿ ಪ್ರತಿವಾದಿಗಳಾಗಿರುವ ಇಬ್ಬರನ್ನು ಹೊರತುಪಡಿಸಿ ಕೆಳಕಂಡ ನಾಲ್ಕು ಜನರನ್ನು ಸಿಂಡಿಕೇಟ್ ಸದಸ್ಯರಾಗಿ ಮುಂದುವರೆಸಲಾಗಿದೆ.

1. ಡಾ. ಹೆಚ್. ಕೃಷ್ಣರಾಮ್
2. ರೆವ್‌ಡಾ. ಫ್ರಾನ್ಸಿಸ್ ಅಸಿಸಿ ಆಲ್ಮೇದಾ
3. ಶ್ರೀ. ಕೆ.ಪಿ. ಪಾಟೀಲ್
4. ಶ್ರೀಮತಿ. ಶಿಲ್ಪಶ್ರೀ. ವಿ.ಎನ್

2. ದಿನಾಂಕ 30.07.2024 ರಂದು ರಸಾಯನಶಾಸ್ತ್ರ ವಿಭಾಗದವರು ಆಯೋಜಿಸಿದ್ದ ಸಮಾರಂಭದಲ್ಲಿ ಭಾಗವಹಿಸಲಾಯಿತು.

3. ದಿನಾಂಕ 07.08.2024 ರಂದು ಕ್ರೀಡಾ ಸಲಹಾ ಸಮಿತಿ ಸಭೆ ಜರುಗಿಸಿ ಅದರ ನಡವಳಿಗಳನ್ನು ಇಂದಿನ ಸಭೆಯಲ್ಲಿ ಮಂಡಿಸಲಾಗಿದೆ.

4. ದಿನಾಂಕ 09.08.2024 ರಂದು ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಯೋಜನೆಯ ಅಂಗವಾಗಿ ಡಿಜಿಟಲ್-ಆರೋಗ್ಯ-ಇಂಧನ ಕಾರ್ಯತಂತ್ರಗಳನ್ನು ರೂಡಿಸಿಕೊಳ್ಳುವ ಕುರಿತು ಇಂಗ್ಲೆಂಡ್ ದೇಶದ ಎನ್.ಹೆಚ್.ಎಸ್. ಟ್ರಸ್ಟ್ ಮತ್ತು ವೋಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯದ ಜೊತೆಗೂಡಿ ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ಬೆಂಗಳೂರು ವಿಶ್ವವಿದ್ಯಾನಿಲಯ, The Energy and Resources Institute (TERI)ಗಳ ಸಹಯೋಗದೊಂದಿಗೆ ಒಂದು ದಿವಸದ ಅಂತರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ವೋಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯದ ಪ್ರೊ. ಪ್ರಶಾಂತ್ ಪಿಳ್ಳೈ ಸಹ-ಕುಲಪತಿಗಳು, ಡಾ. ಸುರೇಶ್‌ರೇಣುಕಪ್ಪ, ಪ್ರೊ. ಸುಭಾಷಿಣಿ ಸುರೇಶ್ ಮತ್ತು ಪ್ರೊ. ಮೈಕೆಲ್ ಫುಲೆನ್‌ರವರು, ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿಗಳಾದ ಡಾ. ಜಯಕರ ಶೆಟ್ಟಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನಿರ್ದೇಶಕರಾದ ಡಾ. ಚಂದ್ರಶೇಖರ್ ಕೆ.ಜಿ, ಟೇರಿ ಸಂಸ್ಥೆಯ ಹಿರಿಯ ನಿರ್ದೇಶಕರಾದ ಡಾ. ಜಿತೇಂದ್ರ ವೀರ್ ಶರ್ಮರವರು ಹಾಗೂ ಎನ್. ಹೆಚ್. ಎಸ್. ಟ್ರಸ್ಟ್‌ನಿಂದ ಪ್ರೊ. ಟೋನಿ ವಿನಿತ್, ಡಾ. ಚಂದ್ರಶೇಖರ ರಂಗಸ್ವಾಮಿ ಮತ್ತು ಡಾ. ರಣ್‌ವೀರ್ ಚೀಮಾರವರು ಭಾಗವಹಿಸಿದ್ದರು.

5. ದಿನಾಂಕ 13.08.2024 ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನೇತೃತ್ವದಲ್ಲಿ Sector Skill Council ದೊಂದಿಗೆ Apprenticeship Embedded Degree Programme (AEDP) ಕುರಿತಂತೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು. ವಿಶ್ವವಿದ್ಯಾನಿಲಯದ ಸಂಯೋಜಿತ ಸರ್ಕಾರಿ ಕಾಲೇಜುಗಳಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗಿದ್ದು, ಅದರ ಪ್ರಕಾರ ವಾಣಿಜ್ಯ ಪದವಿ ವಿದ್ಯಾರ್ಥಿಗಳು 2 ವರ್ಷ ಕಾಲೇಜಿನಲ್ಲಿ ಅಧ್ಯಯನ ಮಾಡಿ, 3ನೇ ವರ್ಷ ಸಂಬಂಧಿಸಿದ ಉದ್ಯಮ/ಸಂಸ್ಥೆಯಲ್ಲಿ Apprenticeship ತರಬೇತಿ ಪಡೆದು ಅದೇ ಸಂಸ್ಥೆಯಲ್ಲಿ ಉದ್ಯೋಗ ಪಡೆಯುವ ಸಾಧ್ಯತೆ ಇದೆ.

6. ದಿನಾಂಕ 14.08.2024 ರಂದು ಗ್ರಂಥಾಲಯ ಸಲಹಾ ಸಮಿತಿಯ ಸಭೆಯನ್ನು ಜರುಗಿಸಲಾಯಿತು. ಸದರಿ ಸಭೆಯ ನಡವಳಿಗಳನ್ನು ಇಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದೆ.

7. ದಿನಾಂಕ 15.08.2024 ರಂದು 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಯೋಜಿಸಲಾಯಿತು.

8. ದಿನಾಂಕ 20.08.2024 ರಂದು ಸದ್ಭಾವನಾ ದಿನಾಚರಣೆಯನ್ನು ಆಚರಿಸಿ ಪ್ರಮಾಣ ವಚನ ಭೋದಿಸಲಾಯಿತು. ಅದೇ ದಿವಸ ಸಂಜೆ 6.00 ಗಂಟೆಗೆ ರಾಮನಗರ ಜಿಲ್ಲೆಯ ಅರಳಾಳುಸಂದ್ರ ಗ್ರಾಮದಲ್ಲಿ ಆಯೋಜಿಸಲಾಗಿದ್ದ, ಸಮಾಜಕಾರ್ಯ ಗ್ರಾಮೀಣ ಶಿಬಿರವನ್ನು ಉದ್ಘಾಟಿಸಲಾಯಿತು.

9. ದಿನಾಂಕ 26.08.2024 ರಿಂದ 28.08.2024 ರವರೆಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಬಿಸಿಯು ಉತ್ಸವ 2.0 ಆಚರಿಸಲಾಯಿತು.

10. ದಿನಾಂಕ 30.08.2024 ರಂದು ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಎಸ್.ಇ.ಪಿ ಆಧಾರಿತ ಬಿಬಿಎ ವ್ಯಾಸಂಗಗಳ ಕುರಿತು ಓರಿಯಂಟೇಷನ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಾಯಿತು.

11. ದಿನಾಂಕ 05.09.2024 ರಂದು ಶಿಕ್ಷಕರ ದಿನಾಚರಣೆಯನ್ನುಆಚರಿಸಲಾಯಿತು.

12. ದಿನಾಂಕ 10.09.2024 ರಂದು ವಿಶ್ವವಿದ್ಯಾನಿಲಯದ ಗಡಿಯಾರ ಗೋಪುರ ಕಟ್ಟಡದಲ್ಲಿ "ಬ್ರಿಟಿಷ್‌ಕೌನ್ಸಿಲ್ ಪ್ರೀಮಿಯಮ್ ಡಿಜಿಟಲ್ ಲೈಬ್ರರಿ ವಾಲ್" ಅನ್ನು ರಾಜ್ಯ ಉನ್ನತ ಶಿಕ್ಷಣ ಸಚಿವರಾದ ಡಾ. ಎಂ.ಸಿ ಸುಧಾಕರ್‌ರವರು ಅನಾವರಣಗೊಳಿಸಿದರು. ಈ ಸಮಾರಂಭದಲ್ಲಿ ಬ್ರಿಟಿಷ್ ಕೌನ್ಸಿಲ್‌ನ ಭಾರತ ದೇಶದ ನಿರ್ದೇಶಕರಾದ ಆಲಿಸನ್ ಬ್ಯಾರೆಟ್ ಮತ್ತು ಕರ್ನಾಟಕ ಮತ್ತು ಕೇರಳ ರಾಜ್ಯಗಳ ಡೆಪ್ಯೂಟಿ ಬ್ರಿಟಿಷ್ ಹೈ ಕಮಿಷನರ್ ಚಂದ್ರು ಅಯ್ಯರ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

13. ಬ್ರಿಟೀಷ್ ಕೌನ್ಸಿಲ್ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಹಯೋಗದಲ್ಲಿ Scholars for OutstandingUnder Graduate Tallents (SCOUT)ಯೋಜನೆ ಅಡಿಯಲ್ಲಿ ಆಯ್ಕೆ ಮಾಡಿದ ರಾಜ್ಯದ 6 ವಿಶ್ವವಿದ್ಯಾಲಯಗಳಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯವು ಆಯ್ಕೆಯಾಗಿದ್ದು, ಈ ಯೋಜನೆಯ ಪ್ರಕಾರ ಪ್ರತಿಭಾವಂತ 5 ಸ್ನಾತಕ ವಿದ್ಯಾರ್ಥಿಗಳನ್ನು ಒಬ್ಬರು ಪ್ರಾಧ್ಯಾಪಕರ ಜೊತೆಗೆ ಇಂಗ್ಲೆಂಡ್ ದೇಶದ University of East Landಗೆ ಹೆಚ್ಚಿನ ಜ್ಞಾನಾರ್ಜನೆಗಾಗಿ ಕಳುಹಿಸಲಾಗುವುದು.

ಬ್ರಿಟೀಷ್ ಕೌನ್ಸಿಲ್ "Digital Library Wall" ಅನಾವರಣಗೊಳಿಸುವ ಸಮಾರಂಭದ ಆಹ್ವಾನ ಪತ್ರಿಕೆ ತಮಗೆ ಬಂದಿಲ್ಲವೆಂದು ಶ್ರೀ ಸಮರ್ಥ ಮುನಿರಾಜು ಹಾಗೂ ಶ್ರೀ ಎಂ. ವಿ. ರಂಗಪ್ಪನವರ ಅಸಮಾಧಾನವನ್ನು ವ್ಯಕ್ತಪಡಿಸಿದರು. ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗಗಳು, ಆಡಳಿತ ವಿಭಾಗಗಳು, ಆಚರಿಸುವ ಎಲ್ಲಾ ಪ್ರಮುಖ ಸಮಾರಂಭಗಳಿಗೆ ಇ-ಆಹ್ವಾನ ಪತ್ರಿಕೆಯನ್ನು ಇ-ಮೇಲ್, ವಾಟ್ಸ್‌ಪ್ ಗುಂಪುಗಳ ಮೂಲಕ ಕಳುಹಿಸಲಾಗಿರುತ್ತದೆ. ಹಾಗೆಯೇ ಸದರಿ ಕಾರ್ಯಕ್ರಮ ಗ್ರಂಥಾಲಯ ವಿಭಾಗದಿಂದ ಆಯೋಜಿಸಿದ್ದು, ಕಳೆದ 5 ತಿಂಗಳಿಂದ Digital Library Wall ಅನಾವರಣಕ್ಕೆ ಪತ್ರ ವಿನಿಯಮಯ ನಡೆದಿದ್ದು, ಪ್ರಸ್ತುತ ಸಮಾರಂಭಕ್ಕೆ ಬ್ರಿಟಿಷ್ ಕೌನ್ಸಿಲ್‌ನ ಮುಖ್ಯಸ್ಥರು ಹಾಗೂ ಮಾನ್ಯ ಮಂತ್ರಿಗಳ ಒಪ್ಪಿಗೆ ಹಿಂದಿನ ದಿವಸ ದೊರತಿರುವ, ಕಾರಣ ಆಹ್ವಾನ ಪತ್ರಿಕೆಯನ್ನು ವಾಟ್ಸ್‌ಪ್ ಗುಂಪುಗಳಲ್ಲಿ ಕಳುಹಿಸಲಾಗಿದೆ. ವೈಯುಕ್ತಿಕ ಇ-ಮೇಲ್ ಮತ್ತು ವಾಟ್ಸ್‌ಪ್‌ಗಳಲ್ಲಿ ಹಾಕಲಿಲ್ಲ. ಇನ್ನೂ ಪ್ರಮುಖ ಸಮಾರಂಭಗಳ ಆಹ್ವಾನ ಪತ್ರಿಕೆಯನ್ನು ಸದಸ್ಯರಿಗೆ

ವೈಯುಕ್ತಿಕವಾಗಿ ಕಳುಹಿಸಲು ಕ್ರಮ ವಹಿಸುವಂತೆ ಆಯೋಜಕರು/ವಿಭಾಗಗಳಿಗೆ ಸೂಚಿಸಲಾಗುವುದು ಎಂದು ಹೇಳಿದರು.

ನಂತರ ಕಾರ್ಯಸೂಚಿಯಂತೆ ವಿಷಯಗಳನ್ನು ಮಂಡಿಸಲು ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ಸೂಚಿಸಿದರು. ಅದರಂತೆ ಕೆಳಗಿನ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲಾಯಿತು.

**ವಿಷಯ ಸಂಖ್ಯೆ: 01**

ವಿಷಯ: ದಿನಾಂಕ 29.07.2024 ರಂದು ಜರುಗಿದ 27ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿ

***ಸಿಂಡಿಕೇಟ್ ತೀರ್ಮಾನ:***

**ದಿನಾಂಕ 29.07.2024 ರಂದು ಜರುಗಿದ 27ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಕೆಳಗಿನ ಅಭಿಪ್ರಾಯ/ವಿವರಣೆಗಳೊಂದಿಗೆ ಒಪ್ಪಿಗೆ ನೀಡಲಾಯಿತು.**

i. **ಸರ್ಕಾರಿ ಕಲಾ ಮಹಾವಿದ್ಯಾಲಯವನ್ನು ವಿಶ್ವವಿದ್ಯಾನಿಲಯದ ಘಟಕ ಮಹಾವಿದ್ಯಾಲಯವಾಗಿ ಪರಿಗಣಿಸಲು ಸಮಿತಿ ರಚಿಸಲಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.**

ii. **ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪಾವತಿಸಬೇಕಾದ ಬಾಕಿ ಶುಲ್ಕ ಕುರಿತು ರಚಿಸಲಾದ ಸಮಿತಿಯ ಸಭೆಯನ್ನು ಕೂಡಲೇ ಕರೆಯಲಾಗುವುದೆಂದು ತಿಳಿಸಲಾಯಿತು.**

iii. **ಸರ್ಕಾರ ನೇರ ನೇಮಕಾತಿಗಾಗಿ ಅನುಮತಿಸಿರುವ 59 ಹುದ್ದೆಗಳಿಗೆ ಸಂಬಂಧಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಯಾಗಿ ಬಂದಿರುವ ಪ್ರಾಧ್ಯಾಪಕರಿಗೆ ಅನ್ವಯಿಸುವ ರೋಸ್ಟರ್ ಬಿಂದುಗಳನ್ನು ಗುರುತಿಸಿ ಪರಿಷ್ಕೃತ ರೋಸ್ಟರ್ ಬಿಂದುಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಲಾಯಿತು.**

**ಕೆಲವು ಸದಸ್ಯರು ಅನುಪಾಲನಾ ವರದಿಯ ಮೇಲೆ ಚರ್ಚಿಸಲು ಬಯಸಿದಾಗ ಸಭಾಧ್ಯಕ್ಷರು ಪ್ರಸ್ತುತ ವಿಷಯ ಕಳೆದ 27ನೇ ಸಿಂಡಿಕೇಟ್ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮದ ವರದಿಯಾಗಿದ್ದು, ಈ ಸಂದರ್ಭದಲ್ಲಿ ಮೂಲ ವಿಷಯದ ಚರ್ಚೆಗೆ ಅವಕಾಶವಿರುವುದಿಲ್ಲವೆಂದು ತಿಳಿಸಿದರು.**

**ಹೊಸದಾಗಿ ನಾಮನಿರ್ದೇಶಿತರಾದ ಮಾನ್ಯ ಸದಸ್ಯರ ಅನುಭವ ಹಾಗೂ ಪರಿಣಿತಿಯ ಅರಿವು ಇದ್ದು ಅವರ ಅನುಭವ ಹಾಗೂ ಕಾಳಜಿಯನ್ನು ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಮುಕ್ತ ಮನಸ್ಸಿನಿಂದ ಉಪಯೋಗಿಸಿಕೊಳ್ಳಲಾಗುವುದು ಎಂದು ತಿಳಿಸಿದರು.**

**ವಿಷಯ ಸಂಖ್ಯೆ: 2**

ವಿಷಯ: 14.08.2024 ರಂದು ಜರುಗಿದ 5ನೇ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳ ಅನುಮೋದನೆ ಕುರಿತು

***ಪರಮಾರ್ಶಕ ಟಿಪ್ಪಣಿ:***

ಬೆಂಗಳೂರು ನಗರವಿಶ್ವವಿದ್ಯಾನಿಲಯ 5ನೇ ಗ್ರಂಥಾಲಯ ಸಲಹಾ ಸಮಿತಿ ಸಭೆಯನ್ನು ದಿನಾಂಕ.14.08.2024 ರಂದು ಜರುಗಿರುತ್ತದೆ. ಸದರಿ ಸಭೆಯಲ್ಲಿ ಗ್ರಂಥಾಲಯಕ್ಕೆ ಬೇಕಾಗಿರುವ ಖರೀದಿ ಕುರಿತು ವಿವರವಾಗಿ ಚರ್ಚಿಸಿ ನಡವಳಿಗಳನ್ನು ಸಿದ್ಧಪಡಿಸಲಾಗಿದೆ.

5ನೇ ಗ್ರಂಥಾಲಯ ಸಲಹಾ ಸಮಿತಿಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಣೆ:**

ಮಾನ್ಯ ಸದಸ್ಯರಾದ ಡಾ.ಕೃಷ್ಣರಾಮ್‌ರವರು ವಿಷಯ ಸಂಖ್ಯೆ 5 ಕುರಿತಂತೆ ಗ್ರಂಥಾಲಯಕ್ಕೆ 2024-25ನೇ ಸಾಲಿಗೆ ಇ-ಸಂಪನ್ಮೂಲ, ಇ-ಪುಸ್ತಕ ಮತ್ತು ಇ-ಜರ್ನಲ್‌ಗಳನ್ನು ಖರೀದಿಸುವ ಅಗತ್ಯವಿಲ್ಲವೆಂದು ತಿಳಿಸಿ, ಭೌತಿಕ ಪುಸ್ತಕಗಳನ್ನು ಖರೀದಿಸಬೇಕೆಂದು ಪ್ರಸ್ತಾಪಿಸಿದರು. ಇ-ಸಂಪನ್ಮೂಲಗಳನ್ನು ಖರೀದಿಸುವ ಕುರಿತು ಆಕ್ಷೇಪವನ್ನು ವ್ಯಕ್ತಪಡಿಸಿ ಗ್ರಂಥಾಲಯ ಸಲಹಾ ಸಮಿತಿಯ ನಡವಳಿಗಳ ಶಿಫಾರಸ್ಸು ಸಂಖ್ಯೆ 05ಕ್ಕೆ ತಮ್ಮ ಅಸಮ್ಮತಿಯನ್ನು ಲಿಖಿತ ರೂಪದಲ್ಲಿ ನೀಡುವುದಾಗಿ ತಿಳಿಸಿದರು.

ಸದಸ್ಯರಾದ ಡಾ. ಲಕ್ಷ್ಮಿನಾರಾಯಣರವರು ಚರ್ಚೆಯಲ್ಲಿ ಭಾಗವಹಿಸಿ ಪ್ರಸ್ತುತ ತಂತ್ರಜ್ಞಾನ ಕಾಲಮಾನದಲ್ಲಿ ಎಲ್ಲಾ ಗ್ರಂಥಾಲಯಗಳು ಇ-ಸಂಪನ್ಮೂಲಗಳನ್ನು ಹೊಂದಿರುವುದು ಅನಿವಾರ್ಯವಾಗಿದೆ. ಸದಸ್ಯರು ಅಭಿಪ್ರಾಯಪಟ್ಟಂತೆ ನಮ್ಮ ಗ್ರಂಥಾಲಯದಲ್ಲಿರುವ ಇ-ಸಂಪನ್ಮೂಲಗಳನ್ನು ಬೇರೆ ಕಾಲೇಜುಗಳು / ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಬಳಕೆಗೆ ಅವಕಾಶ ಕಲ್ಪಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು, ಗ್ರಂಥಾಲಯ ಸಲಹಾ ಸಮಿತಿ ಈ ಕುರಿತು ಚರ್ಚಿಸಿ ಆಯಾಯ ಕಾಲ ಘಟ್ಟದ ಅಗತ್ಯಕ್ಕೆ ಅನುಗುಣವಾಗಿ ಇ-ಸಂಪನ್ಮೂಲ, ಇ-ಪುಸ್ತಕ, ಇ-ಜರ್ನಲ್‌ಗಳನ್ನು ಖರೀದಿಸಲು - Expression of Interest ಗಳನ್ನು, ಸಂಬಂಧಿಸಿದ ಪ್ರಕಾಶಕರಿಂದ ಪ್ರಸ್ತುತಿಯನ್ನು (Presentation) ಏರ್ಪಡಿಸಲಾಗುವುದು. ಗ್ರಂಥಾಲಯ ಸಲಹಾ ಸಮಿತಿ ಶಾಸನಾತ್ಮಕ ಸಮಿತಿಯಾಗಿದ್ದು, ಈ ಸಮಿತಿಯಲ್ಲಿ ಡೀನರು, ಪ್ರಾಧ್ಯಾಪಕರು, ಪರಿಣಿತರು, ಪ್ರಾಧಿಕಾರಗಳ ಸದಸ್ಯರು ಹಾಗೂ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಗ್ರಂಥಪಾಲಕರು ಇಲ್ಲದ ಕಾರಣ ಮೈಸೂರು ವಿಶ್ವವಿದ್ಯಾಲಯದ ಗ್ರಂಥಪಾಲಕರನ್ನು ಸದಸ್ಯರನ್ನಾಗಿ ಆಹ್ವಾನಿಸಲಾಗಿದೆ. ಕಾರಣ ಸದರಿ ಪರಿಣಿತರ ಸಮಿತಿ ಶಿಫಾರಸ್ಸು ಮಾಡುವ ಇ-ಸಂಪನ್ಮೂಲ, ಇ-ಪುಸ್ತಕ, ಇ-ಜರ್ನಲ್‌ಗಳನ್ನು ಖರೀದಿಸಲು ಕ್ರಮವಹಿಸಬೇಕಾಗಿದೆ. ಗ್ರಂಥಾಲಯ ಸಲಹಾ ಸಮಿತಿಯ ನಡವಳಿಗಳನ್ನು ಅನುಮೋದಿಸಬೇಕೆಂದು ತಿಳಿಸಿದರು.

***ಸಿಂಡಿಕೇಟ್ ತೀರ್ಮಾನ:***

**ದಿನಾಂಕ 14.08.2024 ರಂದು ಜರುಗಿದ ಗ್ರಂಥಾಲಯ ಸಮಿತಿ ಸಭೆಯ ನಡವಳಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಲು ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 3**

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮಂಡಳಿಗಳನ್ನು ಪುನರ್ ರಚಿಸುವ ಕುರಿತು

***ಪರಮಾರ್ಶಕ ಟಿಪ್ಪಣಿ:***

ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪರಿಚ್ಛೇದ 33 ರ ಪ್ರಕಾರ ವಿಶ್ವವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿರುವ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ವ್ಯಾಸಂಗಗಳ ಕೆಳಕಂಡ 59 ವಿಷಯಗಳಿಗೆ ಪ್ರತ್ಯೇಕವಾದ ಅಥವಾ ಏಕೀಕೃತ ಅಧ್ಯಯನ ಮಂಡಳಿಗಳನ್ನು 3 ವರ್ಷಗಳ ಅವಧಿಗೆ ರಚಿಸಲು ಅವಕಾಶ ಕಲ್ಪಿಸಲಾಗಿದೆ.

| Sl.No | BoS to be reconstituted in the following Subjects |
|---|---|
| | **Arts Faculty:** |
| 1. | Kannada – PG |
| 2. | Kannada – UG |
| 3. | English – PG |
| 4. | English – UG |
| 5. | Foreign Languages – PG & UG (Common Board) |
| 6. | Hindi – UG |
| 7. | Sanskrit – UG |
| 8. | Tamil & Malayalam – UG |
| 9. | Telugu – UG |
| 10. | Urdu – UG & PG (Common Board) |
| 11. | Economics – PG |
| 12. | Economics – UG |
| 13. | Visual Art and Fine Arts – PG & UG (Common Board) |
| 14. | History – PG |
| 15. | History – UG |
| 16. | Mass Communication & Journalism – PG |
| 17. | Mass Communication & Journalism – UG |
| 18. | Performing Arts – UG |
| 19. | Political Science – PG |
| 20. | Political Science – UG |
| 21. | Social Work – PG & UG (Common Board) |
| 22. | Sociology – PG |
| 23. | Sociology – UG |
| 24. | Women Studies – UG |
| | **Commerce Faculty**: |
| 25. | Commerce – PG – M.Com, M.Com (FA, IB) |
| 26. | Commerce – PG – MTTM & MTTM (5years Integrated Course ) Diploma & PG Diploma (PG) |
| 27. | Master of Business Administration (MBA) |
| 28. | Commerce – UG – B.Com, B.Com (F & A, LSCM, BDA, Tourism) |
| 29. | Commerce – UG – BBA, BBA(Aviation), Fire & Safety), BHM & B. Voc - (UG) |
| | **Science Faculty:** |
| 30. | Bio-Chemistry – PG |
| 31. | Bio-Chemistry – UG |
| 32. | Botany – PG |
| 33. | Botany – UG |
| 34. | Chemistry – PG |
| 35. | Chemistry – UG |
| 36. | Computer Science & Application and B.Voc (Information Technology) – PG & UG (Common Board) |
| 37. | Electronic Science – UG |
| 38. | Environment & Climate Change – PG |
| 39. | Environmental Science – UG |
| 40. | Fashion & Apparel Design Tech – PG |

| | |
|---|---|
| 41. | Fashion & Apparel Design Tech – UG |
| 42. | Geography – UG |
| 43. | Home Science – PG & UG (Common Board) |
| 44. | Mathemactics – PG |
| 45. | Mathematics – UG |
| 46. | Microbiology & Biotechnology – PG |
| 47. | Microbiology & Biotechnology – UG |
| 48. | Physics – PG |
| 49. | Physics – UG |
| 50. | Psychology – PG & UG (Common Board) |
| 51. | Speech & Hearing – PG & UG (Common Board) |
| 52. | Statistics – PG & UG (Common Board) |
| 53. | Sericulture – UG |
| 54. | Zoology – PG |
| 55. | Zoology & Genetics – UG |
| 56. | Ciminology & Forensic Science – UG |
| | **Education Faculty:** |
| 57. | Education – PG |
| 58. | Education – UG |
| 59. | Physical Education – UG |

ಈ ಕುರಿತು ಬೆಂಗಳೂರು ವಿಶ್ವವಿದ್ಯಾನಿಲಯದ ಪರಿನಿಯಮಗಳ ಪ್ರಕಾರ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಲ್ಲಿ ಪ್ರತ್ಯೇಕವಾಗಿ ಅಧ್ಯಯನ ಮಂಡಳಿ ರಚಿಸಿದಲ್ಲಿ ತಲಾ 10 ಜನ ಸದಸ್ಯರನ್ನು ನಾಮನಿರ್ದೇಶನ ಮಾಡಲು ಅವರಲ್ಲಿ ಬಾಹ್ಯ ಸದಸ್ಯರನ್ನು ಹೊಂದಿರಲು ಅವಕಾಶವಿದೆ.

ಸ್ನಾತಕ ಹಾಗೂ ಸ್ನಾತಕೋತ್ತರ ವಿಷಯಗಳಿಗೆ ಏಕೀಕೃತ ಅಧ್ಯಯನ ಮಂಡಳಿ ರಚಿಸಿದಲ್ಲಿ 15 ಜನ ಸದಸ್ಯರನ್ನು ಹೊಂದಲು ಅವಕಾಶವಿದ್ದು, ಅವರಲ್ಲಿ ನಾಲ್ಕು ಜನ ಬಾಹ್ಯ ಸದಸ್ಯರನ್ನು ಹೊಂದಿರಬೇಕಾಗುತ್ತದೆ.

ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕೆಳಕಂಡ 7 ಸ್ನಾತಕೋತ್ತರ ವಿಭಾಗಗಳಲ್ಲಿ ಮಾತ್ರ ಖಾಯಂ ಪ್ರಾಧ್ಯಾಪಕರು ಇದ್ದು, ಅವರನ್ನು ಆಯಾಯ ಅಧ್ಯಯನ ಮಂಡಗಳಿಗೆ ಪರಿಗಣಿಸಬಹುದಾಗಿದೆ.

| ಕ್ರ.ಸಂ. | ವಿಭಾಗ |
|---|---|
| 1. | ಆಂಗ್ಲ ವಿಭಾಗ |
| 2. | ವಿದೇಶಿ ಭಾಷೆಗಳ ವಿಭಾಗ |
| 3. | ವಾಣಿಜ್ಯ ವಿಭಾಗ |
| 4. | ನಿರ್ವಹಣೆ ವಿಭಾಗ |
| 5. | ರಸಾಯನಶಾಸ್ತ್ರ ವಿಭಾಗ |
| 6. | ಜೀವರಸಾಯನಶಾಸ್ತ್ರ ವಿಭಾಗ |
| 7. | ಗಣಿತಶಾಸ್ತ್ರ ವಿಭಾಗ |

ಉಳಿದ 52 ಅಧ್ಯಯನ ಮಂಡಳಿಗಳ ಅಧ್ಯಕ್ಷತೆಗಾಗಿ ಹಾಗೂ ಸ್ನಾತಕೋತ್ತರ ಅಧ್ಯಯನ ಮಂಡಳಿಗಳನ್ನು ರಚಿಸಲು ಮಾತೃ ವಿಶ್ವವಿದ್ಯಾಲಯವಾಗಿರುವ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ರಾಜ್ಯದ

ಇತರ ವಿಶ್ವವಿದ್ಯಾಲಯಗಳ ಅಧ್ಯಾಪಕರನ್ನು ಅವಲಂಬಿಸಬೇಕಾಗಿದೆ. ಸ್ನಾತಕ ಅಧ್ಯಯನ ಮಂಡಳಿಗಳಿಗೆ ಸಂಯೋಜಿತ ಕಾಲೇಜುಗಳ ಅಧ್ಯಾಪಕರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಪರಿಗಣಿಸಬೇಕಾಗುತ್ತದೆ. ಕೇವಲ ಸ್ನಾತಕ ವಿಷಯಗಳಿಗೆ ಮಾತ್ರ ಅಧ್ಯಯನ ಮಂಡಳಿಗಳ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಹಿರಿಯ ಪ್ರಾಧ್ಯಾಪಕರಿಗೆ ವಹಿಸಬಹುದಾಗಿದೆ.

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರ ವಿವರಗಳನ್ನು ತರಿಸಿ ಕ್ರೋಢೀಕೃತ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಅದನ್ನು ಸಭೆಯಲ್ಲಿ ಮಂಡಿಸಲಾಗುವುದು. ಇನ್ನು ಕೆಲವು ಕಾಲೇಜುಗಳು ಶಿಕ್ಷಕರ ಪಟ್ಟಿ ಸಲ್ಲಿಸಬೇಕಾಗಿದ್ದು, ಅಂತಹ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಲು ಹಾಗೂ ವಿವಿಧ ಕಾರಣಗಳಿಂದ ಮಹಾವಿದ್ಯಾಲಯದ ಸೇವೆಯಿಂದ ನಿರ್ಗಮಿಸುವ ಅಧ್ಯಾಪಕರ ಹೆಸರುಗಳನ್ನು ಕೈಬಿಡಲು ಹಾಗೂ ಅಧ್ಯಯನ ಮಂಡಳಿಗಳಲ್ಲಿ ರಿಕ್ತವಾಗುವ ಸ್ಥಾನಗಳಿಗೆ ಬೇರೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಕುಲಪತಿಗಳಿಗೆ ಅಧಿಕರಿಸಬಹುದಾಗಿದೆ.

ಅಧ್ಯಯನ ಮಂಡಳಿಗಳ ರಚನೆಯ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಣೆ:**

ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಕೇವಲ 7 ವಿಭಾಗಗಳಲ್ಲಿ ಖಾಯಂ ಬೋಧಕರು ಇದ್ದು, ರಚಿಸಬೇಕಾದ ಅಧ್ಯಯನ ಮಂಡಳಿಗಳು 59 ಇರುತ್ತವೆ. ಹೀಗಾಗಿ ಇನ್ನುಳಿದ ಅಧ್ಯಯನ ಮಂಡಳಿಗಳಿಗಾಗಿ ಬೇರೆ ವಿಶ್ವವಿದ್ಯಾಲಯ ಪ್ರಾಧ್ಯಾಪಕರನ್ನು ಅವಲಂಬಿಸಬೇಕಾಗಿದೆ. ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕರ ಸಂಖ್ಯೆ ಕಡಿಮೆ ಇರುವುದರಿಂದ ಆಯಾ ವಿಶ್ವವಿದ್ಯಾಲಯಗಳ ಕೆಲಸ ಕಾರ್ಯಗಳ ಜೊತೆಗೆ ನಮ್ಮ ವಿಶ್ವವಿದ್ಯಾಲಯದ ಜವಾಬ್ದಾರಿಯನ್ನು ಅವರು ವಹಿಸಬೇಕಾಗಿದೆ. ವೈಯಕ್ತಿಕವಾಗಿ ವಿನಂತಿಸಿ ಅವರನ್ನು ಒಪ್ಪಿಸಬೇಕಾಗಿದೆ. ನಮ್ಮ ವಿಶ್ವವಿದ್ಯಾನಿಲಯದ ಎಲ್ಲ ವಿಭಾಗಗಳಿಗೆ ಶಿಕ್ಷಕರ ನೇಮಕಾತಿ ಆಗುವವರೆಗೆ ಈ ಪರಿಸ್ಥಿತಿ ಮುಂದುವರೆಯುತ್ತದೆ ಎಂದು ಮಾನ್ಯ ಕುಲಪತಿಗಳು ವಿವರಿಸಿದರು. ಬೇರೆ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಸಂಯೋಜಿತ ಮಹಾವಿದ್ಯಾಲಯಗಳ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಗಿದ್ದು, ಅವುಗಳನ್ನು ಆಧರಿಸಿ ಅಧ್ಯಯನ ಮಂಡಳಿಗಳನ್ನು ರಚಿಸಲಾಗುವುದು. ಅಧ್ಯಯನ ಮಂಡಳಿಗಳನ್ನು ರಚಿಸುವ ಸಂದರ್ಭದಲ್ಲಿ ಆಯ್ಕೆ ಮಾಡುವ ಅಧ್ಯಾಪಕರು ಆಯಾಯ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಂಡು ಪರಿನಿಯಮಗಳ ಪ್ರಕಾರ ಅಧ್ಯಯನ ಮಂಡಳಿಗಳನ್ನು ರಚಿಸಲಾಗುವುದು. ಮಾನ್ಯ ಸಿಂಡಿಕೇಟ್ ಸದಸ್ಯರು ಅಧ್ಯಯನ ಮಂಡಳಿಗಳನ್ನು ರಚಿಸಲು ಅನುಮೋದನೆ ನೀಡಬೇಕೆಂದು ಹಾಗೂ ರಚಿಸಲಾದ ಅಧ್ಯಯನ ಮಂಡಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

***ಸಿಂಡಿಕೇಟ್ ತೀರ್ಮಾನ:***

**ವಿವಿಧ ಅಧ್ಯಯನ ಮಂಡಳಿಗಳನ್ನು ರಚಿಸಲು ಸಿಂಡಿಕೇಟ್ ಸಭೆ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 4

ವಿಷಯ: ಡಾ. ತಾಂಡವ ಗೌಡ ಟಿ.ಎನ್. ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ, ಅವರು Italyಯ Rome ನಲ್ಲಿರುವ Vergata Universityದಲ್ಲಿ 2024, ಅಕ್ಟೋಬರ್ 9–11 ರವರೆಗೆ ನಡೆಯಲಿರುವ "Marginalities / Marginalità"– ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಹಾಜರಾಗಲು ಅನುಮತಿಸಿರುವ ಬಗ್ಗೆ.

ಉಲ್ಲೇಖ:
1. ಡಾ. ತಾಂಡವ ಗೌಡ ಟಿ.ಎನ್. ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ, ಅವರ ಮನವಿ ಪತ್ರ ದಿನಾಂಕ: 05.08.2024.
2. ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ:BCU/EST/ OOD/ I.C/ V.U.R.I/ 2024-25/ 210, Dated: 20.08.2024.

***ಪರಮಾರ್ಶಕ ಟಿಪ್ಪಣಿ:***

ಡಾ. ತಾಂಡವಗೌಡ ಟಿ.ಎನ್. ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ ಅವರು Italyಯ Romeನಲ್ಲಿರುವ Vergata Universityದಲ್ಲಿ 2024, ಆಕ್ಟೋಬರ್ 9–11 ರವರೆಗೆ ನಡೆಯಲಿರುವ "Marginalities/Marginalità" – ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ***"The Othering of Muslims in Indian Cinema on OTT platforms"***ಎಂಬ ಶೀರ್ಷಿಕೆಯ paper present ಮಾಡಿರುತ್ತಾರೆ. ಸದರಿಯವರು ಮೇಲ್ಕಂಡ ದಿನಾಂಕಗಳಲ್ಲಿ ಭಾಗವಹಿಸಲು ಅನುಮತಿಸುವಂತೆ ಹಾಗೂ ಬೇಬಾಕಿ ಪತ್ರವನ್ನು ನೀಡುವಂತೆ ಉಲ್ಲೇಖಿತ (1) ರಲ್ಲಿ ಕೋರಿರುತ್ತಾರೆ. ಅದರಂತೆ ಉಲ್ಲೇಖಿತ (2) ರ ಕಛೇರಿ ಆದೇಶದಲ್ಲಿ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ಡಾ.ತಾಂಡವಗೌಡ ಟಿ.ಎನ್ ಅವರಿಗೆ ದಿನಾಂಕ: 09.10.2024 ರಿಂದ 11.10.2024 ರವರೆಗಿನ ಪ್ರಯಾಣದ ದಿನಗಳನ್ನು ಒಳಗೊಂಡಂತೆ ಅವರು ಕರ್ತವ್ಯಕ್ಕೆ ಗೈರು ಹಾಜರಾಗುವುದನ್ನು ಯುಜಿಸಿ ನಿಯಮಾವಳಿ 2018 8.1 i(a) & iv ಪ್ರಕಾರ OOD ಎಂದು ಪರಿಗಣಿಸಿ Vergata Universityನಲ್ಲಿ ಭಾಗವಹಿಸಲು ಅನುಮತಿ ನೀಡಲಾಗಿರುತ್ತದೆ. ಸದರಿ ವಿಷಯವನ್ನು ಸಿಂಡಿಕೇಟ್‌ನ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**ವಿವರಣೆ:**

ವಿಭಾಗದ ಶೈಕ್ಷಣಿಕ ಹಿತದೃಷ್ಟಿಯಿಂದ ಡಾ.ತಾಂಡವಗೌಡ ರವರನ್ನು ಉನ್ನತ ಶಿಕ್ಷಣ ಪರಿಷತ್ತಿನ ಆತಂರಿಕ ಕಾರ್ಯಭಾಗದಿಂದ ಮುಕ್ತಗೊಳಿಸುವಂತೆ, ಉನ್ನತ ಶಿಕ್ಷಣ ಪರಿಷತ್ತಿಗೆ ತಿಳಿಸಬೇಕೆಂದು ಸದಸ್ಯರಾದ ಡಾ.ಕೃಷ್ಣರಾಮ್‌ರವರು ಪ್ರಸ್ತಾಪಿಸಿದರು.

***ಸಿಂಡಿಕೇಟ್ ತೀರ್ಮಾನ:***

**ಡಾ. ತಾಂಡವಗೌಡ ಟಿ. ಎನ್. ಸಹಾಯಕ ಪ್ರಾಧ್ಯಾಪಕರು ಆಂಗ್ಲ ವಿಭಾಗ ಇವರಿಗೆ 09 ರಿಂದ 11 ಅಕ್ಟೋಬರ್ 2024ರ ವರೆಗೆ ಇಟಲಿ ದೇಶದ ರೊಮ್ ನಗರದ Vergata University ಯಲ್ಲಿ ಜರುಗುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ನೀಡಿರುವ ಅನುಮತಿಗೆ ಘಟನೋತ್ತರ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ:5

ವಿಷಯ: ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರು ನೇಮಕ ಮಾಡಿ ಆದೇಶ ಹೊರಡಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಬಗ್ಗೆ.

ಉಲ್ಲೇಖ: ವಿ.ವಿ. ಅಧಿಸೂಚನೆ ಸಂಖ್ಯೆ:ಬೆಂ.ನ.ವಿ/ಸಿಬ್ಬಂದಿ/ದೈ.ಶಿ.ನಿ.ಪ್ರ.ನಿ.ನೇ/2024-25/233, ದಿನಾಂಕ: 03.09.2024.

*ಪರಮಾರ್ಶಕ ಟಿಪ್ಪಣಿ:*

ಉಲ್ಲೇಖ (1) ರ ಅಧಿಸೂಚನೆ ಪ್ರಕಾರ ಡಾ: ಕೆ. ಶಿವಶಂಕರ್, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಮತ್ತು ಮುಖ್ಯಸ್ಥರು, ಸಸ್ಯಶಾಸ್ತ್ರ ವಿಭಾಗ ಅವರನ್ನು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶನಾಲಯ ವಿಭಾಗಕ್ಕೆ ಪ್ರಭಾರ ನಿರ್ದೇಶಕರಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಪ್ರಕರಣ 26ರಡಿಯಲ್ಲಿ ದಿನಾಂಕ: 03.09.2024 ರಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ನೇಮಕ ಮಾಡಿ ಅಧಿಸೂಚಿಸಲಾಗಿರುತ್ತದೆ.

ಮೇಲಿನ ವಿಷಯವನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

*ಸಿಂಡಿಕೇಟ್ ತೀರ್ಮಾನ:*

**ಡಾ. ಕೆ. ಶಿವಶಂಕರ ಪ್ರಾಧ್ಯಾಪಕರು ರಸಾಯನಶಾಸ್ತ್ರ ವಿಭಾಗ ಇವರನ್ನು ದೈಹಿಕ ಶಿಕ್ಷಣ ನಿರ್ದೇಶನಾಲಯ ಪ್ರಭಾರ ನಿರ್ದೇಶಕರಾಗಿ ನೇಮಕ ಮಾಡಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 6

ವಿಷಯ : ದಿನಾಂಕ. 07.08.2024 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿಯ ನಡವಳಿಗಳ ಅನುಮೋದನೆ ಕುರಿತು.

*ಪರಮಾರ್ಶಕ ಟಿಪ್ಪಣಿ:*

ವಿಶ್ವವಿದ್ಯಾಲಯದ ಕ್ರೀಡಾ ಸಲಹಾ ಸಮಿತಿಯ ಸಭೆಯನ್ನು ದಿನಾಂಕ 07.08.2024 ರಂದು ಜರುಗಿರುತ್ತದೆ. ಸದರಿ ಸಭೆಯಲ್ಲಿ ವಿಶ್ವವಿದ್ಯಾಲಯದ 2024-25ನೇ ಸಾಲಿನ ಕ್ರೀಡಾ ಚಟುವಟಿಕೆಗಳ ಕುರಿತು ವಿವರವಾಗಿ ಚರ್ಚಿಸಿ ನಡವಳಿಗಳನ್ನು ಸಿದ್ಧಪಡಿಸಲಾಗಿದೆ.

ಕ್ರೀಡಾ ಸಲಹಾ ಸಮಿತಿಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ದಿನಾಂಕ.07.08.2024 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 7**

ವಿಷಯ: ಡಾ. ಪಿ. ನಾಗರಾಜು, ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಉಪಬಂಧ 58ರ ಅಡಿಯಲ್ಲಿ ವರ್ಗಾವಣೆ ಮಾಡುವ ಕುರಿತು.

ಉಲ್ಲೇಖ: ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳ ಟಿಪ್ಪಣಿ ಸಂ. ಮು.ಮಂ./ ಆ.ಕಾ/ಇಸಿಎಂ. 853267/24 ದಿನಾಂಕ 12.09.2024

*ಪರಾಮರ್ಶಕ ಟಿಪ್ಪಣಿ:*

ಡಾ. ಪಿ. ನಾಗರಾಜು, ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಿಗೆ ಉಲ್ಲೇಖ (2) ರಲ್ಲಿ ನಮೂದಿಸಿದ ಪತ್ರ ಬರೆದು, ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆ ಖಾಲಿಯಿದ್ದು, ಆಡಳಿತಾತ್ಮಕ ಕಾರಣಗಳಿಂದಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಉಪಬಂಧ 58ರ ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಸದರಿ ಉಪಬಂಧದನ್ವಯ ತಮ್ಮನ್ನು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಅಂತರ್ ವಿಶ್ವವಿದ್ಯಾಲಯಗಳ ವರ್ಗಾವಣೆಯಡಿ ವರ್ಗಾವಣೆ ಮಾಡುವ ಇವರ ಮನವಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಸೂಕ್ತ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಕಳುಹಿಸಿ ಕೊಡುವಂತೆ ಸಲ್ಲಿಸಿರುವ ಕೋರಿಕೆಯನ್ನು ಉಲ್ಲೇಖಿತ ಟಿಪ್ಪಣಿಯೊಂದಿಗೆ ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಖಾಲಿ ಇರುವ ನಾಲ್ಕು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ, ನೇರ ನೇಮಕಾತಿಗೆ ಅನುಮತಿಸಿರುವ ಎರಡು ಹುದ್ದೆಗಳನ್ನು ಹೊರತುಪಡಿಸಿ ಡಾ. ಪಿ. ನಾಗರಾಜ ರವರನ್ನು ವರ್ಗಾಯಿಸುವ ಕುರಿತು ಅಗತ್ಯಕ್ರಮ ವಹಿಸಲು ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳ ಟಿಪ್ಪಣಿ ಕುರಿತಂತೆ ಸೂಕ್ತ ನಿರ್ಣಯಕ್ಕಾಗಿ ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ಡಾ. ಪಿ. ನಾಗರಾಜು, ಸಹಾಯಕ ಪ್ರಾಧ್ಯಾಪಕರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಇವರನ್ನು ಹುದ್ದೆ ಸಹಿತವಾಗಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಒಪ್ಪಿದಲ್ಲಿ ವರ್ಗಾವಣೆಗೆ ಸಹಮತ ವ್ಯಕ್ತಪಡಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ಸಾಮಾನ್ಯ ವಿಷಯಗಳ ಚರ್ಚೆ:**

1. ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದಾಗ ಅವರಿಗೆ ಕುಳಿತುಕೊಳ್ಳಲು ಒಂದು ವ್ಯವಸ್ಥೆ ಮಾಡಬೇಕೆಂದು ಸದಸ್ಯರಾದ ಶ್ರೀ ಕೆ. ಪಿ. ಪಾಟೀಲ್ ಅವರು ಸಭಾಧ್ಯಕ್ಷರಿಗೆ ವಿನಂತಿಸಿದರು.
2. ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪನವರು ಗುತ್ತಿಗೆ ಆಧಾರಿತ ಸಿಬ್ಬಂದಿಗಳು ಮಾಸಿಕ ವೇತನವನ್ನು ಹೆಚ್ಚಿಗೆ ಮಾಡುವ ಕುರಿತು ಸಿಬ್ಬಂದಿಗಳು ನೀಡಿದ ದಿನಾಂಕ 13.09.2024ರ ಪತ್ರವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. ಕಳೆದ 6–7 ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಈ ಸಿಬ್ಬಂದಿಗಳಿಗೆ ವೇತವನ್ನು ಹೆಚ್ಚಿಸಲು ತೀರ್ಮಾನ ಕೈಗೊಳ್ಳುವಂತೆ ಸಿಂಡಿಕೇಟ್ ಸಭೆಯನ್ನು ವಿನಂತಿಸಿದರು. ಸಿಬ್ಬಂದಿಗಳು ಸಲ್ಲಿಸಿದ ಸೇವಾ ಅವಧಿ ಹಾಗೂ ಹುದ್ದೆಗಳನ್ನು ಆಧರಿಸಿ ವೇತನ ಹೆಚ್ಚಿಸಲು ಶಿಫಾರಸ್ಸು ಮಾಡಬೇಕೆಂದು ಮಾನ್ಯ ಸದಸ್ಯರಾದ ಡಾ.ಕೃಷ್ಣರಾಮ್ ಸಲಹೆ ನೀಡದರು.

   **ತೀರ್ಮಾನ:**

   **ಗುತ್ತಿಗೆ ಸಿಬ್ಬಂದಿಗಳ ವೇತನ ಹೆಚ್ಚಿಸುವ ಕುರಿತು ಪರಿಶೀಲಿಸಿ ಶಿಫಾರಸ್ಸು ಮಾಡಲು ಮಾನ್ಯ ಕುಲಪತಿಗಳು ಒಂದು ಉಪಸಮಿತಿಯನ್ನು ರಚಿಸಬೇಕೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

3. ಮಾನ್ಯ ಸದಸ್ಯರಾದ ಶ್ರೀ ಕೃಷ್ಣರಾಮ್‌ರವರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಸತಿಗೃಹಗಳ ನಿರ್ಮಾಣವಾಗಬೇಕೆಂದು ಸಲಹೆ ನೀಡಿದರು. ಮಾನ್ಯ ಕುಲಪತಿಗಳು ಈ ಕುರಿತು ಈಗಾಗಲೇ ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳೊಂದಿಗೆ ಪತ್ರ ವ್ಯವಹಾರ ಮಾಡಿದ್ದು, ಯಲಹಂಕ ಪ್ರದೇಶದಲ್ಲಿ 50 ಎಕರೆ ಜಮೀನು ನೀಡಲು ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರ ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯಲ್ಲಿ 6.5 ಎಕರೆ ಪ್ರದೇಶವನ್ನು ಗುರುತಿಸಿದ್ದು, ಅಲ್ಲಿ ಒಂದು ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸುವ ಉದ್ದೇಶ ಹೊಂದಲಾಗಿದೆ. ಜಮೀನು ವಿಶ್ವವಿದ್ಯಾನಿಲಯದ ಸುರ್ಪದಿಗೆ ಬಂದ ನಂತರ ವಿದ್ಯಾರ್ಥಿಗಳ ವಸತಿಗೃಹ ನಿರ್ಮಾಣ ಕುರಿತಂತೆ ಕ್ರಮವಹಿಸಲಾಗುವುದು ಎಂದು ತಿಳಿಸಲಾಯಿತು.

ಕುಲಸಚಿವರು (ಆಡಳಿತ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

**ಸಹಿ**
**ಕುಲಸಚಿವರು**
**ಸದಸ್ಯ ಕಾರ್ಯದರ್ಶಿಗಳು**

**ಸಹಿ**
**ಕುಲಪತಿಗಳು**
**ಸಭಾಧ್ಯಕ್ಷರು**

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು